MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - FRIDAY 16-6-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಸತತ 3ನೇ ದಿನ ಮಲೇಶೀಯನ್ ಪಾಮೆಣ್ಣೆ ದರ ಹೆಚ್ಚಳ

ಒಣ ಹವೆ, ಪಾಮೆಣ್ಣೆ ಹಾಗೂ ಖಾದ್ಯತೈಲ ಮತ್ತು ಅಮೇರಿಕಾದಲ್ಲಿ ಸೋಯಾಬೀನ್ ಎಣ್ಣೆ ಉತ್ಪಾದನೆ ಇಳಿಕೆಯಾಗುವ ಕಳವಳದಿಂದ ಮಲೇಶಿಯನ್ ಪಾಮೆಣ್ಣೆ ದರ ಸತತ 3 ನೇ ದಿನ ಹೆಚ್ಚಳವಾಗಿದೆ. ಆದರೆ 1–15 ಜೂನ್ ಅವಧಿಯಲ್ಲಿ ಅಲ್ಲಿನ ಪಾಮೆಣ್ಣೆ ರಫ್ತು 16.5 ಶೇಕಡಾ ಇಳಿಕೆಯಾಗಿರುವುದು ಹೆಚ್ಚಿನ ದರ ಹೆಚ್ಚಳಕ್ಕೆ ತಡೆಯಾಗಿದೆಯೆನ್ನಲಾಗಿದೆ. ದರ 1.97 ಶೇಕಡಾ ಟನ್ ಗೆ 68 ರಿಂಗಿಟ್ಸ್ ಹೆಚ್ಚಳವಾಗಿ 3520 ರಿಂಗಿಟ್ಸ್($ 761.25) ಆಗಿದೆಯೆನ್ನಲಾಗಿದೆ.

## ಗೋಧಿ, ಜೋಳ ದರ ಸ್ಥಿರ

ಭಾರತದ ಪ್ರಮುಖ ಮಾರುಕಟ್ಟೆಗಳಲ್ಲಿ ಗೋಧಿ, ಜೋಳ ದರಗಳು ಸ್ಥಿರವಿದೆಯೆನ್ನಲಾಗಿದೆ. ಮಧ್ಯಪ್ರದೇಶ, ರಾಜಸ್ತಾನಗಳಲ್ಲಿ ಗೋಧಿ ಆವಕ ಮತ್ತು ದರ ಸ್ಥಿರವಿದೆಯೆನ್ನಲಾಗಿದೆ. ಈ ವರ್ಷ ಗೋಧಿ ಜಾಗತಿಕ ಉತ್ಪಾದನೆ ಹೆಚ್ಚಳವಾಗಲಿದೆಯೆಂದು USDA ಅಂದಾಜಿಸಿದೆ. ಜೋಳ ದರ ಹಾಗೂ ಆವಕಗಳು ಸ್ಥಿರವಿದೆಯೆನ್ನಲಾಗಿದೆ. ಗೋಧಿ ಹಾಗೂ ಜೋಳ ಜಾಗತಿಕ ದರ ಇಳಿಕೆಯಾಗಿದೆಯೆನ್ನಲಾಗಿದೆ.

## ಜಾಗತಿಕ ಅಕ್ಕಿ ದರ ಹೆಚ್ಚಳ

ಜಾಗತಿಕ ಮಾರುಕಟ್ಟೆಯಲ್ಲಿ ಅಕ್ಕಿ ದರ ಮತ್ತೆ 3.6 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಇತರ ಜಾಗತಿಕ ರಾಷ್ಟ್ರಗಳೊಂದಿಗೆ ಏರಿಯಾದ ರಾಷ್ಟ್ರಗಳೂ ಅಕ್ಕಿ ಖರೀದಿಗೆ ತೊಡಗಿರುವುದರಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಬಾಂಗ್ಲಾ ದೇಶ ವರ್ಷದ ಪ್ರಥಮ 11 ತಿಂಗಳುಗಳಲ್ಲಿ 634,000 ಟನ್ ಅಕ್ಕಿ ಆಮದು ಮಾಡಿದೆಯೆನ್ನಲಾಗಿದೆ. ವಿಯೆಟ್ನಾಂ ನಲ್ಲಿ ರಫ್ತು ಕರಾರುಗಳನ್ನು ಪೂರೈಸಲು ರೈತರಿಂದ ಖರೀದಿ ವೇಗ ಪಡೆಯುತ್ತಿದೆಯೆನ್ನಲಾಗಿದೆ. ಇಂಡೋನೇಶೀಯಾದಲ್ಲಿ ಬರ ಪರಿಸ್ಥಿತಿಯಿಂದ ಖರೀದಿ ಹೆಚ್ಚಳವಾಗಬಹುದೆನ್ನಲಾಗಿದೆ. ವಿಯೆಟ್ನಾಂನಲ್ಲಿ ಕಟಾವು ಪೂರ್ಣವಾಗುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಅಲ್ಲಿಂದ ಪೂರೈಕೆ ಹೆಚ್ಚಳವಾಗಬಹುದೆನ್ನಲಾಗಿದೆ. ಭಾರತದ ಅಕ್ಕಿ ದರ ಹೆಚ್ಚಳವಾಗಿದ್ದು, ಥೈಲಾಂಡ್‌ನಲ್ಲಿ ಬೇಡಿಕೆ ಇಳಿಕೆಯಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ಆದರೂ ಭಾರತದ ಅಕ್ಕಿ ದರಕ್ಕಿಂತ ಥೈಲಾಂಡ್ ಅಕ್ಕಿ ದರ ಹೆಚ್ಚಳವಿದೆ. ಭಾರತದಲ್ಲಿ ಮುಂಗಾರು ವಿಳಂಬವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಅಕ್ಕಿ ದರ ಇನ್ನೂ ಹೆಚ್ಚಳವಾಗುವ ಸಾಧ್ಯತೆಗಳಿವೆ.

## ಬ್ರೆಜಿಲ್‌ನಲ್ಲಿ 2023–24 ರ ಸಕ್ಕರೆ ಉತ್ಪಾದನೆ 4.7 ಶೇಕಡಾ ಹೆಚ್ಚಳ ಸಾಧ್ಯತೆ

ಬ್ರೆಜಿಲ್‌ನ ಕೊನಾಬ್(CONAB) ಸಂಸ್ಥೆಯ ಪ್ರಕಾರ 2023–24 ನೇ ಸಾಲಿನಲ್ಲಿ ಬ್ರೆಜಿಲ್‌ನ ಸಕ್ಕರೆ ಉತ್ಪಾದನೆ ಹಿಂದಿನ ವರ್ಷಕ್ಕಿಂತ 4.7 ಶೇಕಡಾ ಹೆಚ್ಚಳವಾಗಿ 38.8 ಮಿಲಿಯನ್ ಟನ್‌ಗಳಾಗಲಿದೆ. ಯುನಿಕಾ(UNICA) ಪ್ರಕಾರ ಮೇ ತಿಂಗಳ ಬ್ರೆಜಿಲ್‌ನ ಸಕ್ಕರೆ ಉತ್ಪಾದನೆ ಹಿಂದಿನ ವರ್ಷದ ಈ ಅವಧಿಗಿಂತ 37.7% ಹೆಚ್ಚಳವಾಗಿ 6.972 ಮಿಲಿಯನ್ ಟನ್‌ಗಳಾಗಿವೆಯೆನ್ನಲಾಗಿದೆ. ಕಬ್ಬು ಅರೆಯುವಿಕೆ ಹಿಂದಿನ ವರ್ಷದ 40.5% ರಿಂದ 46.88% ಕ್ಕೆ ಹೆಚ್ಚಳವಾಗಿದೆಯೆನ್ನಲಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ದರ ಇಳಿಕೆಯಾಗಿದೆ. ಆದರೂ ಎಲ್ ನಿನೋ ಹವಾಮಾನದ ಪ್ರತಿಕೂಲ ಪರಿಣಾಮದಿಂದ ಜಾಗತಿಕ ಸಕ್ಕರೆ ಉತ್ಪಾದನೆ ಇಳಿಕೆಯಾಗಲಿದೆಯೆನ್ನಲಾಗಿದೆ. ಅಂತರಾಷ್ಟ್ರೀಯ ಸಕ್ಕರೆ ಸಂಸ್ಥೆ 2023–24 ರಲ್ಲಿ ಜಾಗತಿಕ ಸಕ್ಕರೆ 201 ಮಿಲಿಯನ್ ಟನ್ ಮಿಗತೆಯಾಗಲಿದೆಯೆಂದು ಅಂದಾಜಿಸಿದೆಯೆನ್ನಲಾಗಿದೆ. USDA ಅಂದಾಜಿನಂತೆ 2023–24 ರಲ್ಲಿ ಜಾಗತಿಕ ಸಕ್ಕರೆ ಉತ್ಪಾದನೆ ಹಿಂದಿನ ವರ್ಷಕ್ಕಿಂತ 6% ಹೆಚ್ಚಳವಾಗಿ 187.881 ಮಿಲಿಯನ್ ಟನ್‌ಗಳಾಗಲಿದೆಯೆಂದಿದೆ. ಅಂತರಾಷ್ಟ್ರೀಯ ಸಕ್ಕರೆ ಸಂಸ್ಥೆ (INTERNATIONAL SUGAR ORGANISATION)2022–23 ರ ಜಾಗತಿಕ ಸಕ್ಕರೆ ಉತ್ಪಾದನಾ ಅಂದಾಜನ್ನು 180.4 ಮಿಲಿಯನ್ ಟನ್‌ಗಳಿಂದ 177.4 ಮಿಲಿಯನ್ ಟನ್‌ಗಳಿಗೆ ಇಳಿಸಿದೆಯೆನ್ನಲಾಗಿದೆ, ಹಾಗೂ ಮಿಗತೆಯನ್ನು 4.15 ಮಿಲಿಯನ್ ಟನ್‌ಗಳಿಂದ 852000 ಟನ್‌ಗಳಿಗೆ ಇಳಿಕೆ ಮಾಡಿದೆ.